# ಕೇಂದ್ರ ರಸ್ತೆ ನಿಧಿ ಅಧಿನಿಯಮ, 2000

31.12.2009ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 42ನೇ ಸಂಪುಟದ 2ನೇ ಸಂಚಿಕೆಯಲ್ಲಿ 120 ರಿಂದ 127ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ – I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ – II
### ಕೇಂದ್ರ ರಸ್ತೆ ನಿಧಿ

3. ಉಪಕರವನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು
4. ಉಪಕರವನ್ನು ಭಾರತದ ಸಂಚಿತ ನಿಧಿಗೆ ಜಮೆ ಮಾಡುವುದು
5. ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು
6. ಕೇಂದ್ರ ರಸ್ತೆ ನಿಧಿಯ ಸ್ಥಾಪನೆ
7. ನಿಧಿಯ ಉಪಯೋಗ
8. ಲೆಕ್ಕಗಳು ಮತ್ತು ಲೆಕ್ಕಪರಿಶೋಧನೆ

### ಅಧ್ಯಾಯ – III
### ಕೇಂದ್ರ ರಸ್ತೆ ನಿಧಿಯ ನಿರ್ವಹಣೆ

9. ನಿಧಿಯನ್ನು ನಿರ್ವಹಿಸಲು ಕೇಂದ್ರ ಸರ್ಕಾರದ ಅಧಿಕಾರಗಳು
10. ಕೇಂದ್ರ ಸರ್ಕಾರದ ಪ್ರಕಾರ್ಯಗಳು
11. ರಾಜ್ಯಗಳ ಪಾಲಿನ ನಿಧಿಯ ನಿರ್ವಹಣೆ
12. ನಿಯಮಗಳನ್ನು ರಚಿಸಲು ಅಧಿಕಾರ
13. ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು
14. ಅಸ್ತಿತ್ವದಲ್ಲಿರುವ ಕೇಂದ್ರ ರಸ್ತೆ ನಿಧಿಗೆ ಸಂಬಂಧಿಸಿದ ಉಪಬಂಧಗಳು
15. ನಿರಸನ ಮತ್ತು ಉಳಿಸುವಿಕೆ

**ಅನುಸೂಚಿ**

# ಕೇಂದ್ರ ರಸ್ತೆ ನಿಧಿ ಅಧಿನಿಯಮ, 2000

(2000ದ ಅಧಿನಿಯಮ ಸಂಖ್ಯೆ 54)

[27ನೇ ಡಿಸೆಂಬರ್ 2000]

ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ ಮತ್ತು ರೈಲ್ವೆ ಕ್ರಾಸಿಂಗ್‌ಗಳಲ್ಲಿ ಸುರಕ್ಷತೆಯ ಸುಧಾರಣೆಗಾಗಿ ಮತ್ತು ಈ ಉದ್ದೇಶಗಳಿಗಾಗಿ ಪೆಟ್ರೋಲು, ಹೈಸ್ಪೀಡ್ ಡೀಸೆಲ್ ಎಣ್ಣೆ ಎಂದು ಸಾಮಾನ್ಯವಾಗಿ ಗೊತ್ತಿರುವ ಮೋಟಾರು ಸ್ಪಿರಿಟ್‌ನ ಮೇಲೆ ಉಪಕರದ ರೂಪದಲ್ಲಿ ಉತ್ಪಾದನಾ ಶುಲ್ಕವನ್ನು ಮತ್ತು ಸೀಮಾ ಶುಲ್ಕವನ್ನು ವಿಧಿಸುವುದಕ್ಕಾಗಿ ಮತ್ತು ಸಂಗ್ರಹಣೆ ಮಾಡುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗಾಗಿ 1988ರಲ್ಲಿ ಸಂಸತ್ತು ಅಂಗೀಕರಿಸಿದ ನಿರ್ಣಯಕ್ಕೆ ಒಳಪಟ್ಟು ಅಸ್ತಿತ್ವದಲ್ಲಿರುವ ಕೇಂದ್ರ ರಸ್ತೆ ನಿಧಿಗೆ ಶಾಸನಾತ್ಮಕ ಸ್ಥಾನಮಾನ ನೀಡುವ ಅಧಿನಿಯಮ.

ಭಾರತ ಗಣರಾಜ್ಯದ ಐವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ– I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಕೇಂದ್ರ ರಸ್ತೆ ನಿಧಿ ಅಧಿನಿಯಮ, 2000 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಇದು 2000ನೇ ಇಸವಿ ನವೆಂಬರ್ 1ನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಗೊತ್ತುಪಡಿಸಿದ ದಿನ" ಎಂದರೆ 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಧಿಯನ್ನು ಯಾವ ದಿನಾಂಕದಂದು ಸ್ಥಾಪಿಸಲಾಗಿದೆಯೋ ಆ ದಿನಾಂಕ ಎಂದು ಅರ್ಥ;

(ಬಿ) "ಉಪಕರ" ಎಂದರೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಪೆಟ್ರೋಲ್ ಮತ್ತು ಹೈಸ್ಪೀಡ್ ಡೀಸೆಲ್ ಎಣ್ಣೆ ಎಂದು ಸಾಮಾನ್ಯವಾಗಿ ಗೊತ್ತಿರುವ ಮೋಟಾರು ಸ್ಪಿರಿಟ್ ಮೇಲೆ ವಿಧಿಸಿರುವ ಮತ್ತು ಸಂಗ್ರಹಿಸಿರುವ ಉತ್ಪಾದನಾ ಶುಲ್ಕ ಮತ್ತು ಸೀಮಾ ಶುಲ್ಕದ ಸ್ವರೂಪದಲ್ಲಿನ ಸುಂಕ ಎಂದು ಅರ್ಥ;

(ಸಿ) "ನಿಧಿ" ಎಂದರೆ 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ಕೇಂದ್ರ ರಸ್ತೆ ನಿಧಿ ಎಂದು ಅರ್ಥ;

(ಡಿ) "ರಾಷ್ಟ್ರೀಯ ಹೆದ್ದಾರಿಗಳು" ಎಂದರೆ ರಾಷ್ಟ್ರೀಯ ಹೆದ್ದಾರಿಗಳ ಅಧಿನಿಯಮ, 1956ರ (1956ರ 48) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಹೆದ್ದಾರಿಗಳು ಅಥವಾ ಸದರಿ ಅಧಿನಿಯಮದ 2ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಹೆದ್ದಾರಿಯೆಂದು ಘೋಷಿಸಿರುವ ಯಾವುದೇ ಇತರ ಹೆದ್ದಾರಿ ಎಂದು ಅರ್ಥ;

(ಇ) "ಭಾರತದ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ" ಎಂದರೆ ಭಾರತದ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ ಅಧಿನಿಯಮ, 1988ರ (1988ರ 68) 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ಪ್ರಾಧಿಕಾರ ಎಂದು ಅರ್ಥ;

(ಎಫ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಂದ ನಿಯಮಿಸಲಾದುದು ಎಂದು ಅರ್ಥ.

## ಅಧ್ಯಾಯ–II

## ಕೇಂದ್ರ ರಸ್ತೆ ನಿಧಿ

**3. ಉಪಕರವನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಉಪಕರವಾಗಿ ಉತ್ಪಾದನಾ ಶುಲ್ಕವನ್ನು ಮತ್ತು ಸೀಮಾ ಶುಲ್ಕವನ್ನು ಭಾರತದಲ್ಲಿ ಉತ್ಪಾದಿಸಿದ ಅಥವಾ ಭಾರತಕ್ಕೆ ಆಮದು ಮಾಡಿಕೊಂಡ, ಅನುಸೂಚಿಯ (2)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಮತ್ತು,–

(ಎ) ಒಂದು ಸಂಸ್ಕರಣ ಕೇಂದ್ರದಿಂದ ಅಥವಾ ಒಂದು ಕಾರ್ಖಾನೆಯಿಂದ ಅಥವಾ ಒಂದು ಔಟ್‌ಲೆಟ್‌ನಿಂದ ಸಾಗಿಸಿದ; ಅಥವಾ

(ಬಿ) ಅಂಥ ವಸ್ತುವನ್ನು ಉತ್ಪಾದಿಸಿದ ಅಥವಾ ಆಮದು ಮಾಡಿಕೊಂಡ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ವರ್ಗಾವಣೆ ಮಾಡಿದ

– ಪ್ರತಿಯೊಂದು ಬಾಬಿನ ಮೇಲೆ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ, ಅನುಸೂಚಿಯ (3)ನೇ ಕಾಲಂನಲ್ಲಿರುವ ಸಂವಾದಿ ನಮೂದನೆಯಲ್ಲಿ ನಮೂದಿಸಿರುವ ದರಕ್ಕಿಂತ ಮೀರದ ದರಗಳಲ್ಲಿ ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು, (ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ವಸ್ತುಗಳಾಗಿರುವ) ಪೆಟ್ರೋಲ್ ಮತ್ತು ಹೈಸ್ಪೀಡ್ ಡೀಸೆಲ್ ಎಣ್ಣೆಗೆ ಸಂಬಂಧಿಸಿದಂತೆ ಉಪಕರದ ದರವನ್ನು ಅಂಥ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸುವವರೆಗೂ, ಈ ಉಪಪ್ರಕರಣದ ಮೇರೆಗೆ, ಪೆಟ್ರೋಲ್ ಮತ್ತು ಹೈಸ್ಪೀಡ್ ಡೀಸೆಲ್ ಎಣ್ಣೆಯ ಮೇಲೆ ಪ್ರತಿ ಲೀಟರ್‌ಗೆ ಒಂದು ರೂಪಾಯಿ ದರದಲ್ಲಿ ಉಪಕರವನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು:

ಮತ್ತೂ ಪರಂತು, ಸಂದರ್ಭಾನುಸಾರ, ಹಣಕಾಸು (ಸಂಖ್ಯೆ 2) ಅಧಿನಿಯಮ, 1998ರ (1998ರ 21)ರ 103ನೇ ಪ್ರಕರಣದ (1)ನೇ ಉಪಪ್ರಕರಣದ ಮತ್ತು 111ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪೆಟ್ರೋಲ್ ಮೇಲೆ ವಿಧಿಸಿದ್ದ ಹೆಚ್ಚುವರಿ ಸೀಮಾ ಶುಲ್ಕವನ್ನು ಮತ್ತು ಹೆಚ್ಚುವರಿ ಉತ್ಪಾದನಾ ಶುಲ್ಕವನ್ನು ಮತ್ತು ಸಂದರ್ಭಾನುಸಾರ, ಹಣಕಾಸು ಅಧಿನಿಯಮ, 1999 (1999ರ 27)ರ 116ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮತ್ತು 133ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೈಸ್ಪೀಡ್ ಡೀಸೆಲ್ ಎಣ್ಣೆಯ ಮೇಲೆ ವಿಧಿಸಿದ್ದ ಹೆಚ್ಚುವರಿ ಸೀಮಾ ಶುಲ್ಕವನ್ನು ಮತ್ತು ಹೆಚ್ಚುವರಿ ಉತ್ಪಾದನಾ ಶುಲ್ಕವನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಅದನ್ನು ವಿಧಿಸಿದ ದಿನಾಂಕದಿಂದ ಉಪಕರವೆಂಬುದಾಗಿ ಭಾವಿಸತಕ್ಕದ್ದು ಮತ್ತು ಅದರಿಂದ ಬಂದ ಹುಟ್ಟುವಳಿಗಳನ್ನು ನಿಧಿಗೆ ಜಮೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಬಾಬಿನ ಮೇಲೆ ವಿಧಿಸತಕ್ಕ ಪ್ರತಿಯೊಂದು ಉಪಕರವನ್ನು ಅಂಥ ಬಾಬನ್ನು ಉತ್ಪಾದಿಸಿದ ವ್ಯಕ್ತಿಯು ಸಂದಾಯ ಮಾಡತಕ್ಕದ್ದು ಮತ್ತು ಆಮದುಗಳ ಸಂದರ್ಭದಲ್ಲಿ ಹಾಗೆ ಆಮದು ಮಾಡಿಕೊಂಡ ಮತ್ತು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಬಾಬುಗಳ ಮೇಲೆ ಉಪಕರವನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಬಾಬಿನ ಮೇಲೆ ವಿಧಿಸತಕ್ಕ ಉಪಕರವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಆ ಬಾಬುಗಳ ಮೇಲೆ ವಿಧಿಸತಕ್ಕ ಯಾವುದೇ ಉಪಕರದ ಅಥವಾ ಶುಲ್ಕದ ಜೊತೆಗೆ ಹೆಚ್ಚುವರಿಯಾಗಿರತಕ್ಕದ್ದು.

(4) ಮರುಪಾವತಿಗಳಿಗೆ ಮತ್ತು ಸುಂಕಗಳಿಂದ ವಿನಾಯಿತಿಗಳಿಗೆ ಸಂಬಂಧಿಸಿದವುಗಳೂ ಒಳಗೊಂಡಂತೆ, ಸಂದರ್ಭಾನುಸಾರ, ಕೇಂದ್ರ ಉತ್ಪಾದನಾ ಶುಲ್ಕ ಅಧಿನಿಯಮ, 1944ರ (1944ರ 1) ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಸೀಮಾ ಶುಲ್ಕ ಅಧಿನಿಯಮ, 1962 (1962ರ 52)ರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು, ಈ ಪ್ರಕರಣದ ಮೇರೆಗೆ ವಿಧಿಸತಕ್ಕ ಉಪಕರಗಳನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಅನ್ವಯವಾಗತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಸಂದರ್ಭಾನುಸಾರ ಕೇಂದ್ರ ಉತ್ಪಾದನಾ ಶುಲ್ಕ ಅಧಿನಿಯಮ, 1944 ಮತ್ತು ಸೀಮಾ ಶುಲ್ಕ ಅಧಿನಿಯಮ, 1962ರ ಉಪಬಂಧಗಳು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಬಾಬುಗಳ ಮೇಲೆ ಉಪಕರವನ್ನು ವಿಧಿಸುವುದಕ್ಕಾಗಿ ಮೇಲೆ ಹೇಳಿದ ಅಧಿನಿಯಮಗಳಲ್ಲಿ ಉಪಬಂಧಿಸಿದ್ದರೆ ಹೇಗೋ ಹಾಗೆ ಜಾರಿಗೊಳ್ಳತಕ್ಕದ್ದು.

**4. ಉಪಕರವನ್ನು ಭಾರತದ ಸಂಚಿತ ನಿಧಿಗೆ ಜಮೆ ಮಾಡುವುದು.**–3ನೇ ಪ್ರಕರಣದ ಮೇರೆಗೆ ವಿಧಿಸಿದ ಉಪಕರದ ಹುಟ್ಟುವಳಿಯನ್ನು ಮೊದಲು ಭಾರತದ ಸಂಚಿತ ನಿಧಿಗೆ ಜಮೆ ಮಾಡತಕ್ಕದ್ದು, ಮತ್ತು ಸಂಸತ್ತು ಈ ಸಂಬಂಧ ಕಾನೂನಿನ ಮೂಲಕ ಮಾಡಿದ ವಿನಿಯೋಜನೆಯ ಮೂಲಕ ಅಂಥ ಹುಟ್ಟುವಳಿಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿ ಉಪಯೋಗಿಸುವುದಕ್ಕಾಗಿ ಸಂಗ್ರಹಣೆಯ ವೆಚ್ಚಗಳನ್ನು ಕಳೆದ ನಂತರ, ಕಾಲಕಾಲಕ್ಕೆ ನಿಧಿಗೆ ಜಮೆ ಮಾಡಬೇಕೆಂದು ಉಪಬಂಧಿಸಿದರೆ, ಕೇಂದ್ರ ಸರ್ಕಾರವು ಹಾಗೆ ಜಮೆ ಮಾಡಬಹುದು.

**5. ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು.**– ಕೇಂದ್ರ ಸರ್ಕಾರವು, ಸಂಸತ್ತು ಈ ಸಂಬಂಧ ಕಾನೂನಿನ ಮೂಲಕ ಮಾಡಿದ ಯುಕ್ತ ವಿನಿಯೋಜನೆಯ ನಂತರ, ನಿಧಿಯಲ್ಲಿ ಅವಶ್ಯವೆಂದು ತಾನು ಪರಿಗಣಿಸುವಂಥ ಹಣದ ಮೊತ್ತವನ್ನು ಅನುದಾನಗಳ ಅಥವಾ ಸಾಲಗಳ ರೂಪದಲ್ಲಿ ಜಮೆ ಮಾಡಬಹುದು.

**6. ಕೇಂದ್ರ ರಸ್ತೆ ನಿಧಿಯ ಸ್ಥಾಪನೆ.**– (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಸಂಬಂಧ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಉದ್ದೇಶಗಳಿಗಾಗಿ "ಕೇಂದ್ರ ರಸ್ತೆ ನಿಧಿ" ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು.

(2) ನಿಧಿಯು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರತಕ್ಕದ್ದು ಮತ್ತು ಆ ನಿಧಿಗೆ,–

(ಎ) 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಸಂದಾಯ ಮಾಡಿದ ಹಣದ ಯಾವುದೇ ಮೊತ್ತವನ್ನು;

(ಬಿ) ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಯ ಉದ್ದೇಶಗಳಿಗಾಗಿ ಈಗಾಗಲೇ ವಿಧಿಸಲಾಗುತ್ತಿದ್ದು ಖರ್ಚಾಗದೆ ಉಳಿದ ಉಪಕರದ ಭಾಗವನ್ನು;

(ಸಿ) ಕೇಂದ್ರ ಸರ್ಕಾರವು ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅಥವಾ ಈ ಅಧಿನಿಯಮದ ಅನುಷ್ಠಾನದಲ್ಲಿ ಪಡೆದ ಮೊತ್ತ ಯಾವುದಾದರೂ ಇದ್ದರೆ ಆ ಮೊತ್ತವನ್ನು;

(ಡಿ) ರಾಜ್ಯ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಕೇಂದ್ರ ಸರ್ಕಾರದಿಂದ ಒದಗಿಸಿದ ಯಾವುದೇ ನಿಧಿಯನ್ನು

– ಜಮೆ ಮಾಡತಕ್ಕದ್ದು.

(3) ನಿಧಿಯ ಜಮೆಯಲ್ಲಿರುವ ಶಿಲ್ಕು, ಹಣಕಾಸಿನ ವರ್ಷದ ಕೊನೆಯಲ್ಲಿ ರದ್ದಾಗತಕ್ಕದ್ದಲ್ಲ.

**7. ನಿಧಿಯ ಉಪಯೋಗ.–** ನಿಧಿಯನ್ನು ಈ ಕೆಳಕಂಡ ಕಾರ್ಯಗಳಿಗೆ, ಎಂದರೆ:–

(i) ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಮತ್ತು ನಿರ್ವಹಿಸಲು;

(ii) ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲು;

(iii) ಅಂತರ ರಾಜ್ಯದ ಮತ್ತು ಆರ್ಥಿಕ ಮಹತ್ವವುಳ್ಳ ರಸ್ತೆಗಳೂ ಸೇರಿದಂತೆ ಇತರ ರಾಜ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಮತ್ತು ನಿರ್ವಹಿಸಲು;

(iv) ಸೇತುವೆಗಳ ಮೂಲಕ ರೈಲುಮಾರ್ಗಗಳ ಕೆಳಗೆ ಅಥವಾ ಮೇಲೆ ರಸ್ತೆಗಳನ್ನು ನಿರ್ಮಿಸಲು ಮತ್ತು ಕಾವಲುಗಾರನಿಲ್ಲದ ರೈಲು– ರಸ್ತೆ ಕ್ರಾಸಿಂಗ್‌ಗಳಲ್ಲಿ ಸುರಕ್ಷತಾ ಕಾಮಗಾರಿಗಳನ್ನು ನಿರ್ಮಿಸಲು; ಮತ್ತು

(v) ನಿಯಮಿಸಬಹುದಾದಂಥ ಯೋಜನೆಗಳ ಸಂದರ್ಭದಲ್ಲಿ ವಿತರಣೆ ಮಾಡಲು

– ಉಪಯೋಗಿಸತಕ್ಕದ್ದು.

**8. ಲೆಕ್ಕಗಳು ಮತ್ತು ಲೆಕ್ಕಪರಿಶೋಧನೆ.–**(1) ಕೇಂದ್ರ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ಸರಿಯಾದ ಲೆಕ್ಕಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಇತರೆ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನೊಡನೆ ಸಮಾಲೋಚಿಸಿ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ, ನಿಧಿಯ ಪೈಕಿ ಅವುಗಳ ಪಾಲಿನ ಹಂಚಿಕೆ ಸಂಬಂಧದಲ್ಲಿ ಲಾಭ ಮತ್ತು ನಷ್ಟದ ಲೆಕ್ಕಗಳ ಮತ್ತು ಜಮಾ ಖರ್ಚು ಪಟ್ಟಿ ಒಳಗೊಂಡಂತೆ ಲೆಕ್ಕಗಳ ವಾರ್ಷಿಕ ವಿವರಣಾ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ನಿಧಿಯ ಲೆಕ್ಕಗಳನ್ನು ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ನಿರ್ದಿಷ್ಟಪಡಿಸಬಹುದಾದಂಥ ಅವಧಿಯ ಅಂತರದಲ್ಲಿ ಅವನು ಲೆಕ್ಕಪರಿಶೋಧನೆ ಮಾಡತಕ್ಕದ್ದು.

## ಅಧ್ಯಾಯ – III

## ಕೇಂದ್ರ ರಸ್ತೆ ನಿಧಿಯ ವ್ಯವಸ್ಥಾಪನೆ

**9. ನಿಧಿಯನ್ನು ನಿರ್ವಹಿಸಲು ಕೇಂದ್ರ ಸರ್ಕಾರದ ಅಧಿಕಾರಗಳು.–** (1) ಕೇಂದ್ರ ಸರ್ಕಾರವು ನಿಧಿಯನ್ನು ನಿರ್ವಹಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು,–

(ಎ) ತಾನು ಅವಶ್ಯಕವೆಂದು ಪರಿಗಣಿಸುವ ರಾಷ್ಟ್ರೀಯ ಹೆದ್ದಾರಿಗಳ ಮತ್ತು ಎಕ್ಸ್‌ಪ್ರೆಸ್ ಮಾರ್ಗಗಳ ಪರಿಯೋಜನೆಗಳ ಮೇಲೆ ಹೂಡಿಕೆಗೆ ಸಂಬಂಧಿಸಿದಂಥ ತೀರ್ಮಾನಗಳನ್ನು ತೆಗೆದುಕೊಳ್ಳತಕ್ಕದ್ದು;

(ಬಿ) ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ ಮತ್ತು ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ನಿಧಿಯನ್ನು ಸಂಗ್ರಹಿಸಲು ಅವಶ್ಯಕವೆನಿಸಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು;

(ಸಿ) (i) ರಾಷ್ಟ್ರೀಯ ಹೆದ್ದಾರಿಗಳ;

(ii) ಗ್ರಾಮೀಣ ರಸ್ತೆಗಳ;

(iii) ರಾಜ್ಯ ರಸ್ತೆಗಳ; ಮತ್ತು

(iv) ಸೇತುವೆಗಳ ಮೂಲಕ ರೈಲು ಮಾರ್ಗಗಳ ಮೇಲೆ ಆಗಲಿ ಅಥವಾ ಕೆಳಗೆ ಆಗಲಿ ರಸ್ತೆಗಳ ನಿರ್ಮಾಣ ಮತ್ತು ಕಾವಲುಗಾರನಿಲ್ಲದ ರೈಲು-ರಸ್ತೆ ಕ್ರಾಸಿಂಗ್‌ಗಳಲ್ಲಿ ಸೂಕ್ತ ಸುರಕ್ಷಾ ಕಾಮಗಾರಿಗಳ ನಿರ್ಮಾಣ

– ಇವುಗಳ ಅಭಿವೃದ್ಧಿಗೆ ಮತ್ತು ನಿರ್ವಹಣೆಗೆ ಜವಾಬ್ದಾರಿಯಾಗಿರುವ ಸಂಬಂಧಪಟ್ಟ ಇಲಾಖೆಗಳಿಗೆ ತಾನು ಅವಶ್ಯವೆಂದು ಪರಿಗಣಿಸುವಂಥ ಮೊತ್ತಗಳನ್ನು ಹಂಚಿಕೆ ಮಾಡುವುದು ಮತ್ತು ವಿತರಣೆ ಮಾಡುವುದು.

**10. ಕೇಂದ್ರ ಸರ್ಕಾರದ ಪ್ರಕಾರ್ಯಗಳು.–** (1) ಕೇಂದ್ರ ಸರ್ಕಾರವು,–

(i) ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ ಹಂಚಿಕೆ ಮಾಡಿದ ನಿಧಿಯ ಪಾಲಿನ ನಿರ್ವಹಣೆಗೆ ಮತ್ತು ವ್ಯವಸ್ಥಾಪನೆಗೆ;

(ii) ನಿಧಿಯಿಂದ ಹಂಚಿಕೆ ಮಾಡಲಾದ ಎಲ್ಲಾ ಮೊತ್ತಗಳ ಸಮನ್ವಯಕ್ಕೆ ಮತ್ತು ಪೂರ್ಣವಾಗಿ ಮತ್ತು ಸಮಯಕ್ಕೆ ಸರಿಯಾಗಿ ಬಳಕೆ ಮಾಡುವುದಕ್ಕೆ;

(iii) ನಿಯಮಿಸಬಹುದಾದ ರೀತಿಯಲ್ಲಿ ಅಂತರ ರಾಜ್ಯ ಮತ್ತು ಆರ್ಥಿಕ ಮಹತ್ವವುಳ್ಳ ರಾಜ್ಯ ರಸ್ತೆಗಳ ಕಾರ್ಯಯೋಜನೆಗಳನ್ನು ಮಂಜೂರು ಮಾಡುವುದಕ್ಕೆ;

(iv) ಅಂತರ ರಾಜ್ಯ ಮತ್ತು ಆರ್ಥಿಕ ಮಹತ್ವವುಳ್ಳ ರಾಜ್ಯ ರಸ್ತೆಗಳ ನಿರ್ದಿಷ್ಟ ಪರಿಯೋಜನೆಗಳನ್ನು ಯಾವ ಆಧಾರದ ಮೇಲೆ ಅನುಮೋದಿಸಬೇಕೋ ಮತ್ತು ರಾಜ್ಯ ರಸ್ತೆಗಳ ಪಾಲಿನಿಂದ ಹಣಕಾಸು ಒದಗಿಸಬೇಕೋ ಆ ಆಧಾರದ ಮೇಲೆ ಮಾನದಂಡವನ್ನು ರೂಪಿಸುವುದಕ್ಕೆ;

(v) ನಿರ್ದಿಷ್ಟ ಪರಿಯೋಜನೆಗಳಿಗಾಗಿ ರಾಜ್ಯಗಳಿಗೆ ನಿಧಿಯನ್ನು ಬಿಡುಗಡೆಗೊಳಿಸುವುದಕ್ಕೆ ಮತ್ತು ಅಂಥ ಪ್ರಾಜೆಕ್ಟುಗಳ ಮತ್ತು ಆ ಸಂಬಂಧ ಮಾಡಲಾದ ವೆಚ್ಚಗಳ ಮೇಲ್ವಿಚಾರಣೆಗೆ;

(vi) ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಅನುಷ್ಠಾನಗೊಳಿಸಬೇಕಾಗಿರುವಂಥ ಪರಿಯೋಜನೆಗಳಿಗೆ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ ಇತರೆ ಪರಿಯೋಜನೆಗಳಿಗೂ ಸಹ ನಿಧಿಯನ್ನು ಹಂಚಿಕೆ ಮಾಡಲು ಮಾನದಂಡವನ್ನು ರೂಪಿಸುವುದಕ್ಕೆ;

(vii) ಸಂವಿಧಾನದ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಂದು ರಾಜ್ಯಕ್ಕೆ ಮತ್ತು ಒಕ್ಕೂಟ ರಾಜ್ಯಕ್ಷೇತ್ರಕ್ಕೆ ನಿಧಿಗಳಲ್ಲಿನ ಪಾಲಿನ ಹಂಚಿಕೆ ಮಾಡುವುದಕ್ಕೆ;

(viii) (ಎ) ನಿಯಮಿಸಬಹುದಾದಂಥ ರೀತಿಯಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಹೈಸ್ಪೀಡ್ ಡೀಸೆಲ್ ಎಣ್ಣೆಯ ಮೇಲೆ ವಿಧಿಸಿದ ಉಪಕರದ ಶೇಕಡ ಐವತ್ತರಷ್ಟನ್ನು; ಮತ್ತು

(ಬಿ) ಹೈಸ್ಪೀಡ್ ಡೀಸೆಲ್ ಎಣ್ಣೆ ಮೇಲಿನ ಉಪಕರದ ಉಳಿದ ಶೇಕಡ ಐವತ್ತರಷ್ಟು ಮೊಬಲಗನ್ನು ಮತ್ತು

– ಪೆಟ್ರೋಲ್ ಮೇಲೆ ಸಂಗ್ರಹಿಸಿದ ಪೂರ್ಣ ಉಪಕರವನ್ನು ಈ ಮುಂದಿನಂತೆ ಎಂದರೆ,–

(i) ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ ಅಂಥ ಮೊತ್ತದ ಶೇಕಡ ಐವತ್ತೇಳುವರೆಯಷ್ಟಕ್ಕೆ ಸಮಾನವಾದ ಮೊತ್ತವನ್ನು;

(ii) ಸೇತುವೆ ಮೂಲಕ ರೈಲು ಮಾರ್ಗಗಳ ಕೆಳಗೆ ಆಗಲಿ ಅಥವಾ ಮೇಲೆ ಆಗಲಿ ರಸ್ತೆ ನಿರ್ಮಾಣದ ಮತ್ತು ಕಾವಲುಗಾರನಿಲ್ಲದ ರೈಲು-ರಸ್ತೆ ಕ್ರಾಸಿಂಗ್‌ಗಳಲ್ಲಿ ಸುರಕ್ಷತಾ ಕಾಮಗಾರಿಯ ನಿರ್ಮಾಣಕ್ಕಾಗಿ ಶೇಕಡ ಹನ್ನೆರಡೂವರೆಯಷ್ಟಕ್ಕೆ ಸಮಾನವಾದ ಮೊತ್ತವನ್ನು; ಮತ್ತು

(iii) ರಾಷ್ಟ್ರೀಯ ಹೆದ್ದಾರಿಗಳನ್ನು ಹೊರತುಪಡಿಸಿ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ ಉಳಿದ ಶೇಕಡ ಮೂವತ್ತರಷ್ಟನ್ನು ಹಂಚಿಕೆ ಮಾಡುವುದಕ್ಕೆ ಜವಾಬ್ದಾರಿ ಹೊಂದಿರತಕ್ಕದ್ದು ಮತ್ತು ಈ ಹಣದ ಪೈಕಿ ಶೇಕಡ ಹತ್ತರಷ್ಟನ್ನು ಎಂದರೆ ರಾಜ್ಯ ರಸ್ತೆಗಳ ಒಟ್ಟು ಪಾಲಿನ ಶೇಕಡ ಮೂರರಷ್ಟನ್ನು ಈ ಪ್ರಕರಣದ (iii) ಮತ್ತು (iv)ನೇ ಖಂಡಗಳಿಗೆ ಅನುಗುಣವಾಗಿ ಕೇಂದ್ರ ಸರ್ಕಾರವು ಅನುಮೋದಿಸುವಂಥ ಅಂತರ ರಾಜ್ಯ ಮತ್ತು ಆರ್ಥಿಕ ಮಹತ್ವದ ರಾಜ್ಯ ರಸ್ತೆ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ರಾಜ್ಯಗಳಿಗೆ ಹಂಚಿಕೆ ಮಾಡಲು ಕೇಂದ್ರ ಸರ್ಕಾರವು ಮೀಸಲಾಗಿ ಇಡತಕ್ಕದ್ದು.

(2) (1)ನೇ ಉಪಪ್ರಕರಣದ (viii)ನೇ ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು, ಪ್ರತ್ಯೇಕವಾಗಿ ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ, ಸಂದರ್ಭಾನುಸಾರ ಹಣಕಾಸು (ಸಂಖ್ಯೆ. 2) ಅಧಿನಿಯಮ, 1998 (1998ರ 21)ರ 103ನೇ ಪ್ರಕರಣದ (1)ನೇ ಉಪಪ್ರಕರಣದ ಮತ್ತು 111ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪೆಟ್ರೋಲ್ ಮೇಲೆ ವಿಧಿಸಿದ್ದ ಹೆಚ್ಚುವರಿ ಸೀಮಾಶುಲ್ಕವನ್ನು ಮತ್ತು ಹೆಚ್ಚುವರಿ ಉತ್ಪಾದನಾ ಶುಲ್ಕವನ್ನು ಮತ್ತು ಸಂದರ್ಭಾನುಸಾರ ಹಣಕಾಸು ಅಧಿನಿಯಮ, 1999 (1999ರ 27)ರ 116ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮತ್ತು 133ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೈಸ್ಪೀಡ್ ಡೀಸೆಲ್ ಎಣ್ಣೆಯ ಮೇಲೆ ವಿಧಿಸಿದ್ದ ಹೆಚ್ಚುವರಿ ಸೀಮಾ ಶುಲ್ಕವನ್ನು ಮತ್ತು ಹೆಚ್ಚುವರಿ ಉತ್ಪಾದನಾ ಶುಲ್ಕವನ್ನು, ಹಣಕಾಸು ಅಧಿನಿಯಮ, 2005ರ 119ನೇ ಮತ್ತು 120ನೇ ಪ್ರಕರಣಗಳ ಮೂಲಕ ತಿದ್ದುಪಡಿ ಮಾಡಲಾದಂತೆ ಎರಡು ರೂಪಾಯಿಗಳ ಪೈಕಿ ಐವತ್ತು ಪೈಸೆಗಳನ್ನು 2005ರ ಮಾರ್ಚ್ 1 ರಿಂದ ಜಾರಿಗೆ ಬರುವಂತೆ ಹಂಚಿಕೆ ಮಾಡತಕ್ಕದ್ದು.

**11. ರಾಜ್ಯಗಳ ಪಾಲಿನ ನಿಧಿಯ ನಿರ್ವಹಣೆ.–** 10ನೇ ಪ್ರಕರಣದ (viii)ನೇ ಖಂಡದ (ಬಿ) ಉಪಖಂಡದಲ್ಲಿ ನಿರ್ದಿಷ್ಟಪಡಿಸಲಾದಂತೆ, ರಾಷ್ಟ್ರೀಯ ಹೆದ್ದಾರಿಗಳನ್ನು ಹೊರತುಪಡಿಸಿ ಇತರ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಖರ್ಚುಮಾಡಬೇಕಾದ ನಿಧಿಯ ಪಾಲಿನಿಂದ, ಅಂತರ್‌ರಾಜ್ಯ ಹಾಗೂ ಆರ್ಥಿಕ ಮಹತ್ವದ ರಾಜ್ಯರಸ್ತೆ ಕಾರ್ಯ ಯೋಜನೆಗಳಿಗಾಗಿ ಕೇಂದ್ರ ಸರ್ಕಾರವು ಮೀಸಲಿಟ್ಟಿರುವ ಪಾಲನ್ನು ಕಳೆದ ತರುವಾಯ, ಉಳಿದುದನ್ನು ಕೇಂದ್ರ ಸರ್ಕಾರವು ತೀರ್ಮಾನಿಸಬಹುದಾದಂಥ ರೀತಿಯಲ್ಲಿ ವಿವಿಧ ರಾಜ್ಯಗಳು ಮತ್ತು ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಹಂಚಿಕೆ ಮಾಡತಕ್ಕದ್ದು.

ಪರಂತು, ಕೇಂದ್ರ ಸರ್ಕಾರವು, 10ನೇ ಪ್ರಕರಣದ (viii)ನೇ ಖಂಡದ (ಎ) ಉಪಖಂಡದ ಮೇರೆಗಿನ ನಿಧಿಯ ಪಾಲನ್ನು ಯಾವುದೇ ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ತೆಗೆದುಕೊಂಡಿದ್ದ ಯಾವುದೇ ಸಾಲದ ಮರು ಸಂದಾಯಕ್ಕಾಗಿ ಉಪಯೋಗಿಸಬಹುದು.

(2) ವಿವಿಧ ರಾಜ್ಯಗಳಲ್ಲಿ ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳಲ್ಲಿ ವೆಚ್ಚಕ್ಕಾಗಿ ಹಂಚಿಕೆ ಮಾಡಿದ ನಿಧಿಯ ಪಾಲನ್ನು ವಾಸ್ತವವಾಗಿ ವೆಚ್ಚಮಾಡಲು ಬೇಕಾಗುವವರೆಗೂ ಕೇಂದ್ರ ಸರ್ಕಾರವು ಇಟ್ಟುಕೊಂಡಿರತಕ್ಕದ್ದು.

(3) ಯಾವುದೇ ರಾಜ್ಯ ಸರ್ಕಾರವಾಗಲಿ ಅಥವಾ ಯಾವುದೇ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತವಾಗಲಿ, ಯಾವುದೇ ಸಮಯದಲ್ಲಿ,–

(ಎ) ಆ ರಾಜ್ಯದೊಳಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರದೊಳಗೆ ಮೋಟಾರು ವಾಹನಗಳ ವಿನಿಯಮನ ಹಾಗೂ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರವು ಶಿಫಾರಸ್ಸು ಮಾಡಬಹುದಾದಂಥ ಅಂತಹ ಕ್ರಮಗಳನ್ನು ತೆಗೆದುಕೊಳ್ಳಲು ವಿಫಲವಾಗಿದೆಯೆಂದು; ಅಥವಾ

(ಬಿ) ರಾಜ್ಯದೊಳಗೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರದೊಳಗೆ ವೆಚ್ಚ ಮಾಡುವುದಕ್ಕಾಗಿ ಸಂದರ್ಭಾನುಸಾರ ಹಂಚಿಕೆ ಮಾಡಿದ ಅಥವಾ ಪುನರ್ ಹಂಚಿಕೆ ಮಾಡಿದ ನಿಧಿಯ ಯಾವುದೇ ಪಾಲನ್ನು ಬಳಸುವಲ್ಲಿ ಯುಕ್ತ ಕಾರಣವಿಲ್ಲದೆ ವಿಳಂಬ ಮಾಡಿದೆಯೆಂದು

– ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ, ಆ ಸಮಯದಲ್ಲಿ ಕೇಂದ್ರ ಸರ್ಕಾರವು ಆ ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಮಾಡಬೇಕೆಂದಿರುವ ವೆಚ್ಚಕ್ಕಾಗಿ ಇಟ್ಟುಕೊಂಡಿರಬಹುದಾದ ಯಾವುದೇ ಮೊತ್ತವನ್ನು ಪೂರ್ಣವಾಗಿ ಅಥವಾ ಭಾಗಶಃ ವಾಪಸು ತೆಗೆದುಕೊಳ್ಳಬಹುದು.

(4) ಹಿಂದೆ ಹೇಳಿದಂತೆ ಯಾವುದೇ ರಾಜ್ಯ ಸರ್ಕಾರದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತದ ಲೆಕ್ಕದಿಂದ ಕೇಂದ್ರ ಸರ್ಕಾರವು ವಾಪಸು ತೆಗೆದುಕೊಂಡ ಎಲ್ಲಾ ಮೊತ್ತವನ್ನು, ಲೋಪವೆಸಗಿದ ಮತ್ತು ಇತರ ರಾಜ್ಯ ಸರ್ಕಾರಗಳ ಮತ್ತು ಒಕ್ಕೂಟ ರಾಜ್ಯ ಕ್ಷೇತ್ರಗಳ ಆಡಳಿತದ ಜಮೆ ಲೆಕ್ಕಗಳಿಗೆ, ಯಾವ ವರ್ಷದಲ್ಲಿ ಅದನ್ನು ಪುನರ್ ಹಂಚಿಕೆ ಮಾಡಲಾಗುವುದೋ ಆ ವರ್ಷದ ಹಿಂದಿನ ಹಣಕಾಸು ವರ್ಷಕ್ಕಾಗಿ ಮಾಡಿದ್ದ ಮುಖ್ಯ ಹಂಚಿಕೆಯ ಪ್ರಮಾಣದಲ್ಲೇ ಪುನರ್ ಹಂಚಿಕೆ ಮಾಡತಕ್ಕದ್ದು.

(5) ಯಾವುದೇ ಹಂಚಿಕೆಯ ಸಂದರ್ಭದಲ್ಲಿ, ನಿಧಿಯ ಜಮೆ ಲೆಕ್ಕದಲ್ಲಿರುವ ಶಿಲ್ಕು ಹಣಕಾಸು ವರ್ಷದ ಕೊನೆಯಲ್ಲಿ ರದ್ದಾಗತಕ್ಕದ್ದಲ್ಲ.

**12. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಯಾವ ಪರಿಯೋಜನೆಗಳಿಗೆ ಸಂಬಂಧಿಸಿದಂತೆ 7ನೇ ಪ್ರಕರಣದ ಮೇರೆಗೆ ನಿಧಿಗಳನ್ನು ವಿತರಣೆ ಮಾಡಬಹುದೋ ಆ ಪರಿಯೋಜನೆಗಳನ್ನು ನಿರ್ದಿಷ್ಟಪಡಿಸುವುದು;

(ಬಿ) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲಾಭ ಮತ್ತು ನಷ್ಟದ ಲೆಕ್ಕ ಮತ್ತು ಜಮಾ–ಖರ್ಚು ಪಟ್ಟಿಯೂ ಒಳಗೊಂಡಂತೆ ಯಾವ ರೀತಿಯಲ್ಲಿ ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರತಕ್ಕದ್ದೋ ಮತ್ತು ವಾರ್ಷಿಕ ಲೆಕ್ಕಪತ್ರಗಳ ವಿವರಣಾ ಪಟ್ಟಿಯನ್ನು ತಯಾರಿಸತಕ್ಕದ್ದೋ ಆ ರೀತಿ;

(ಸಿ) 10ನೇ ಪ್ರಕರಣದ ಮೇರೆಗೆ, ಅಂತರ ರಾಜ್ಯ ಮತ್ತು ಆರ್ಥಿಕ ಮಹತ್ವವುಳ್ಳ ರಾಜ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮತ್ತು ಅವುಗಳನ್ನು ನಿರ್ವಹಿಸುವುದಕ್ಕಾಗಿ ಕಾರ್ಯಯೋಜನೆಗಳನ್ನು ಯಾವ ರೀತಿಯಲ್ಲಿ ರೂಪಿಸಬೇಕೋ ಮತ್ತು ಮಂಜೂರು ಮಾಡಬೇಕೋ ಆ ರೀತಿ;

(ಡಿ) ಯಾವ ವಿಷಯಕ್ಕಾಗಿ ನಿಯಮವನ್ನು ರಚಿಸಬೇಕೋ ಅಥವಾ ರಚಿಸಬಹುದೋ ಆ ಯಾವುದೇ ಇತರ ವಿಷಯವನ್ನು ನಿಯಮಿಸುವುದು.

**13. ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**14. ಅಸ್ತಿತ್ವದಲ್ಲಿರುವ ಕೇಂದ್ರ ರಸ್ತೆ ನಿಧಿಗೆ ಸಂಬಂಧಿಸಿದ ಉಪಬಂಧಗಳು.–** ಗೊತ್ತುಪಡಿಸಿದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ 1988ರ ಮೇ ತಿಂಗಳ ದಿನಾಂಕ 13ರ ಸಂಸತ್ತಿನ ನಿರ್ಣಯಕ್ಕೆ ಒಳಪಟ್ಟು ಕೇಂದ್ರ ರಸ್ತೆ ನಿಧಿಯನ್ನು (ಈ ಪ್ರಕರಣದಲ್ಲಿ ಇನ್ನು ಮುಂದೆ ಅಸ್ತಿತ್ವದಲ್ಲಿರುವ ನಿಧಿ ಎಂದು ಉಲ್ಲೇಖಿಸಲಾದ) ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ನಿಧಿಯೆಂದು ಭಾವಿಸತಕ್ಕದ್ದು, ಮತ್ತು,–

(ಎ) ಅಸ್ತಿತ್ವದಲ್ಲಿರುವ ನಿಧಿಯ ಮೇರೆಗೆ ಮಂಜೂರಾದ ರಾಷ್ಟ್ರೀಯ ಹೆದ್ದಾರಿಗಳ ಮತ್ತು ರಾಜ್ಯ ರಸ್ತೆಗಳ ಅಭಿವೃದ್ಧಿಗೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಕಾರ್ಯಯೋಜನೆಗಳನ್ನು ಈ ಅಧಿನಿಯಮದ ಮೇರೆಗೆ ಅಂಥ ಕಾರ್ಯಯೋಜನೆಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಈ ಅಧಿನಿಯಮದ ಮೇರೆಗೆ ಮಂಜೂರಾದ ಕಾರ್ಯಯೋಜನೆಗಳೆಂಬುದಾಗಿ ಭಾವಿಸಕ್ಕದ್ದು;

(ಬಿ) ಆಸ್ತಿಗಳು ಮತ್ತು ಹೊಣೆಗಾರಿಕೆಗಳೂ ಒಳಗೊಂಡಂತೆ ಅಸ್ತಿತ್ವದಲ್ಲಿರುವ ನಿಧಿಯ ಮೇರೆಗೆ ಪ್ರಾಪ್ತವಾದ ಎಲ್ಲಾ ನಿಧಿಗಳನ್ನು ಈ ಅಧಿನಿಯಮದ ಮೇರೆಗೆ ಸ್ಥಾಪಿಸಲಾದ ನಿಧಿಗೆ ವರ್ಗಾವಣೆ ಮಾಡತಕ್ಕದ್ದು.

**15. ನಿರಸನ ಮತ್ತು ಉಳಿಸುವಿಕೆ.–** (1) ಕೇಂದ್ರ ರಸ್ತೆ ನಿಧಿ ಅಧ್ಯಾದೇಶ, 2000 (ಅಧ್ಯಾದೇಶ 2000ದ 5) ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸಿತವಾಗಿದ್ದರೂ ಸಹ, ಸದರಿ ಅಧ್ಯಾದೇಶದ ಮೇರೆಗೆ ಮಾಡಲಾದ ಯಾವುದೇ ಕೃತ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

**ಅನುಸೂಚಿ**

(3ನೇ ಪ್ರಕರಣ ನೋಡಿ)

| **ಕ್ರಮ ಸಂಖ್ಯೆ** | **ಬಾಬಿನ ಹೆಸರು** | **ಸುಂಕದ ದರ** |
|---|---|---|
| **(1)** | **(2)** | **(3)** |
| 1. | ಪೆಟ್ರೋಲ್ ಎಂದು ಸಾಮಾನ್ಯವಾಗಿ ಗೊತ್ತಿರುವ ಮೋಟಾರ್ ಸ್ಪಿರಿಟ್ | ಪ್ರತಿ ಲೀಟರ್‌ಗೆ ಒಂದು ರೂಪಾಯಿ |
| 2. | ಹೈಸ್ಪೀಡ್ ಡೀಸೆಲ್ ಎಣ್ಣೆ | ಪ್ರತಿ ಲೀಟರ್‌ಗೆ ಒಂದು ರೂಪಾಯಿ |

* * *

**(DOT – 14.5.10)**